# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. : 43 ಫ್ರಾ.ಸಾ. :28**

| | | |
|---|---|---|
| ಸಾಕ್ಷಿಯ ಹೆಸರು | : | ಡಾಃ ವೀಣಾ ಪಿ. |
| ಗಂಡನ ಹೆಸರು | : | ಸುನಿಲ್ ಕುಮಾರ್ |
| ವಯಸ್ಸು | : | 37 ವರ್ಷ |
| ಕೆಲಸ | : | ಹಿರಿಯ ವೈಜ್ಞಾನಿಕ ಅಧಿಕಾರಿ, ವಿಷ ವಿಜ್ಞಾನ ವಿಭಾಗ ಆರ್.ಎಫ್.ಎಸ್.ಎಲ್., ಮಂಗಳೂರು. |
| ವಾಸ | : | ಮಂಗಳೂರು |

**ದಿ. 09.02.2026. ರಂದು ಸಾಕ್ಷಿಯು ವಿ.ಸಿ ಮೂಲಕ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-</u>**

1. ನಾನು 2014 ರಿಂದ 2019 ರವರೆಗೆ ವೈಜ್ಞಾನಿಕ ಅಧಿಕಾರಿಯಾಗಿ ಹಾಗೂ ಡಿಸೆಂಬರ್ 2019 ರಿಂದ ಇಲ್ಲಿಯ ವರೆಗೆ ಹಿರಿಯ ವೈಜ್ಞಾನಿಕ ಅಧಿಕಾರಿಯಾಗಿ ಮಂಗಳೂರಿನ ಆರ್.ಎಫ್.ಎಸ್.ಎಲ್. ನಲ್ಲಿ ವಿಷ ವಿಜ್ಞಾನ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಇದುವರೆಗೂ ಸುಮಾರು 3200 ಪ್ರಕರಣಗಳಲ್ಲಿ ವಿಷ ವಿಜ್ಞಾನ ವಿಭಾಗಕ್ಕೆ ಬರುವ ವಸ್ತುಗಳನ್ನು ಪರೀಕ್ಷಿಸಿ, ವರದಿಗಳನ್ನು ನೀಡಿರುತ್ತೇನೆ ಹಾಗೂ ಇಲ್ಲಿಯ ವರೆಗೆ ಸುಮಾರು 70 ಪ್ರಕರಣಗಳಲ್ಲಿ ನಾನು ಸಾಕ್ಷಿ ನೀಡಿರುತ್ತೇನೆ.

2. ದಿನಾಂಕ 15.05.2021 ರಂದು ಹೊನ್ನಾವರ ಪೊಲೀಸ್ ಠಾಣೆ ಗುನ್ನಾ ನಂಬರ 136/2021 ಕ್ಕೆ ಸಂಬಂಧಿಸಿದಂತೆ ಪೊಲೀಸ್ ಸಿಬ್ಬಂದಿಯಾದ ಚಾ.ಸಾ-31/ಸಿಪಿಸಿ-1199 ರವರು ಒಟ್ಟು 3 ಸೀಲಾದ ವಸ್ತುಗಳನ್ನು ಮೇಲಾಧಿಕಾರಿಗಳ ಕೋರಿಕೆ ಪತ್ರದೊಂದಿಗೆ ತಂದು ನಮ್ಮ ಪ್ರಯೋಗಾಲಯಕ್ಕೆ ಪರೀಕ್ಷೆಗಾಗಿ ನೀಡಿದ್ದು, ಅವುಗಳನ್ನು ನಮ್ಮ ಸ್ವೀಕೃತಿ ವಿಭಾಗದವರು ಪಡೆದುಕೊಂಡು, ಅದೇ ದಿನ ನಮ್ಮ ಪ್ರಯೋಗಾಲಯದ ಮುಖ್ಯಸ್ಥರು ಸದರಿ ವಸ್ತುಗಳನ್ನು ಪರೀಕ್ಷೆಗಾಗಿ ನನಗೆ ನೀಡಿರುತ್ತಾರೆ. ಸದರಿ ವಸ್ತುಗಳನ್ನು ಪಡೆದುಕೊಂಡ ನಂತರ ನಾನು

ಅವುಗಳನ್ನು ಪರೀಶಿಲಿಸಲಾಗಿ, ಅವುಗಳ ಮೇಲೆ ಇದ್ದ ಮೊಹರುಗಳು ಸುಸ್ಥಿತಿಯಲ್ಲಿದ್ದವು ಹಾಗೂ ಮಾದರಿ ಮೊಹರುಗಳಿಗೆ ತಾಳೆಯಾಗುತ್ತಿತ್ತು. ಆನಂತರ ನಂತರ ದಿನಾಂಕ 18.05.2021 ರಂದು ನಾನು ಸದರಿ ವಸ್ತುಗಳನ್ನು ಪರೀಕ್ಷೆಗಾಗಿ ನಮ್ಮ ಪ್ರಯೋಗಾಲಯದಲ್ಲಿ ತೆರೆದು ನೋಡಿದಾಗ, ವಸ್ತು ಸಂಖ್ಯೆ 1 ರಲ್ಲಿ M ಎಂದು ಗುರುತು ಮಾಡಿದ liver and kidney ತುಂಡುಗಳು, ವಸ್ತು ಸಂಖ್ಯೆ 2 ರಲ್ಲಿ N ಎಂದು ಗುರುತು ಮಾಡಿದ Stomach and its contents ನ ಭಾಗ, ವಸ್ತು ಸಂಖ್ಯೆ 3 ರಲ್ಲಿ O ಎಂದು ಗುರುತು ಮಾಡಿದ ಸಂರಕ್ಷಿತ salt solution ಇದ್ದವು. ವಸ್ತು ಸಂಖ್ಯೆ 1 ಮತ್ತು 2 ಗಳು ಮೃತ ಅಬುತಾಲಿಬ್ ನ ದೇಹಕ್ಕೆ ಸಂಬಂಧಿಸಿದ ಭಾಗಗಳಾಗಿರುತ್ತದೆ. ವಸ್ತು ಸಂಖ್ಯೆ 3 ನ್ನು ವಸ್ತು ಸಂಖ್ಯೆ 1 ಮತ್ತು 2 ಗಳನ್ನು ದಿನಾಂಕ 03.05.2021 ರಿಂದ ಸಂರಕ್ಷಿಸಲು ಉಪಯೋಗಿಸಿದ ವಸ್ತುವಾಗಿರುತ್ತದೆ.

3. ಈ ವಸ್ತುಗಳನ್ನು ನಾಲ್ಕು ರೀತಿಯ ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ ವರದಿಯನ್ನು ನೀಡಿರುತ್ತೇನೆ. ನನ್ನ ವರದಿಯ ಪ್ರಕಾರ ಈ ಕೆಳಗಿನಂತೆ ನನ್ನ ಅಭಿಪ್ರಾಯವನ್ನು ನೀಡಿರುತ್ತೇನೆ.

> "Colour tests and Thin layer chromatographic methods of analysis have not responded for the presence of residues of volatile poisons, ethyl alcohol, pesticides, drugs, alkaloids, phosphide ions, phosphorous, toxic metal ions and anions in all the above stated articles"

ಅದಾದ ನಂತರ ನಾನು ಪರೀಕ್ಷೆ ನಡೆಸಿದ ಬಗ್ಗೆ ವರದಿಯನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ–86 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ 86(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ., ರವರಿಂದಃ–</u>**

4. ಪ್ರಯೋಗಾಲಯಕ್ಕೆ ಬಂದಂತಹ ವಸ್ತುಗಳನ್ನು ಯಾವ ದಿನಾಂಕದಂದು ಸೀಲ್ ಮಾಡಲಾಗಿತ್ತು ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಮರಣೋತ್ತರ ಪರೀಕ್ಷೆಗೆ

ಸಂಬಂಧಿಸಿದ ವಸ್ತುಗಳಾಗಿದ್ದರಿಂದ ಅವುಗಳನ್ನು ಮರಣೋತ್ತರ ಪರೀಕ್ಷೆ ವೇಳೆ ಸಂಗ್ರಹಿಸುತ್ತಾರೆ ಎಂದು ನುಡಿಯುತ್ತಾರೆ. ಪರೀಕ್ಷೆಗೆಳ ಒಳಪಡಿಸಿದ ವಸ್ತುಗಳು ನಮ್ಮ ಪ್ರಯೋಗಾಲಯಕ್ಕೆ ಬಂದ ನಂತರ ಅವುಗಳು ನಮ್ಮ ವಿಭಾಗದ ಮುಖ್ಯಸ್ಥರ ವಶದಲ್ಲಿರುತ್ತದೆ. ಸದರಿ ವಸ್ತುಗಳು ಯಾರ ವಶಲಿದ್ದವು ಎಂದು ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಈ ಬಗ್ಗೆ ನಮ್ಮ ರಿಜಿಸ್ಟರಿನಲ್ಲಿ ನಮೂದಿಸಲಾಗುತ್ತದೆ ಎಂದು ನುಡಿಯುತ್ತಾರೆ. ಈ ಪ್ರಕರಣದ ವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ಪರೀಕ್ಷೆ ಮಾಡದೆ ಪೊಲೀಸರ ಕೋರಿಕೆಯ ಮೇಲೆ ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ಸಾಕ್ಷಿಯ ಹೇಳಿಕೆಯನ್ನು ವಿಡಿಯೋ ಕಾನ್ಫರೆನ್ಸ ಮೂಲಕ ಪಡೆಯಲಾಯಿತು. ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ.